


# 1

ಇದು ಆಕಸ್ಮಿಕ.

ಸಚಿವರ ಕೊಠಡಿಯಿಂದೆದ್ದು ಹೊರಬರುತ್ತಿರುವಾಗ ಎದುರಿಗೆ ಆನಂದರಾಜು ಸಿಕ್ಕಿದ್ದು ಆಶ್ಚರ್ಯವಾಯಿತು. ''ಓ! ನೀನೂ'' ಅಂತ ತಡವರಿಸಿದೆ. ಅವನು, ''ಹೌದು ನಾನೇ! ನೆನಪಾದ್ರು ಇದೆಯಲ್ಲ! ನೀನೆಷ್ಟು ಬದಲಾಯಿಸಿಬಿಟ್ಟಿದ್ದೀ ಮಾರಾಯ? ನೀನಿಲ್ಲಿ ಸಿಗಬೌದು ಅಂತ ಗೆಸ್ ಮಾಡಿರಲಿಲ್ಲ. ಬಲೇ ಖುಷಿಯಾಯ್ತುಪ್ಪ'' ಅಂದು ಕೈ ಹಿಡಿದುಕೊಂಡ. ನಾನು ''ಆಮೇಲೆ ಸಿಕ್ಕು'' ಅಂದವನೇ ಚಟಪಟಿಸಿದೆ. ಅವನು, ''ನೀನು ಬಿಟ್ರೆಲ್ಲಿ ಸಿಕ್ತಿ? ಎಷ್ಟು ವರ್ಷಗಳ ಮೇಲೆ ಸಿಕ್ಕಿದ್ದಿ, ನಡಿ ನಾನೂ ಬರ್ತೀನಿ'' ಅಂತ ಜೊತೆಯಲ್ಲೇ ನುಸುಳಿ ಹೊರಬಂದ.

ಸರ್ಕಾರದ ನಿಯಮದಂತೆ ತಾವು ಶಿಫಾರಸು ಮಾಡಿದ್ದ ಜನರಿಗೆ ಅನುದಾನ ನೀಡಲು ಬರುವುದಿಲ್ಲ ಅಂತ ಹೇಳಿದ್ದು ಸಚಿವರಿಗೆ ಕೋಪ ತರಿಸಿತ್ತು. ''ಆ ನಿಯಮ ಯಾರು ಮಾಡಿದ್ದು? ನಾವೇ ಅಲ್ಲವೇನ್ರಿ? ನಾವು ಅಂದ್ರೆ ಸರ್ಕಾರ! ಸರ್ಕಾರ ಹೇಳ್ತಾ ಇದೆ, ಸುಮ್ಮನೆ ಈ ಹದಿನೈದು ಮಂದಿಗೆ ಮಂಜೂರು ಮಾಡ್ರಿ'' – ಅಸಹನೆಯಿಂದ ಜಗ್ಗಿಸಿ ಹೇಳಿದರು. ಏನು ಉತ್ತರ ಕೊಡುವುದು? ''ಸರ್, ಎಲಿಜೆಬಲ್ ಇಲ್ಲದಿರೋರಿಗೆ ಮಂಜೂರು ಮಾಡಲು ನನ್ನಿಂದ ಸಾಧ್ಯವಿಲ್ಲ. ನೀವೇ ಸರ್ಕಾರದ ಮಟ್ಟದಲ್ಲಿ ತಿದ್ದುಪಡಿ ಆದೇಶ ಹೊರಡಿಸಿ ಕೊಡಿ'' ಅಂದವನು ವಾದ ಮಾಡಲು ನನಗಿಷ್ಟವಿಲ್ಲ ಎಂಬಂತೆ ತಲೆ ಆಡಿಸಿದೆ. ಹೊಸದಾಗಿ ಖಾತೆ ವಹಿಸಿಕೊಂಡಿದ್ದ ಸಚಿವರಿಗೆ ಬೆಂಬಲಿಗರ ಮುಂದೆ ಹೆಂಗಾಗಬೇಡ?...

'ಅಧಿಕಾರ ಬೇಕು, ನಿಜ. ಆದರೆ ಅದನ್ನು ಸೇವೆ ಅಂತ ತಿಳಿದು ಜನರ ಕಲ್ಯಾಣಕ್ಕೆ ಬಳಸಬೇಕು ಅನ್ನೋ ಪ್ರಜ್ಞೆ ಯಾವಾಗ ಬರುತ್ತೊ ಕಾಣೆ... ಥುತ್! ಹಾಳು ಗುಲಾಮ ಕೆಲಸವೇ?' – ಒಳಗೇ ಕುದಿಯುತ್ತಿದ್ದ ಅತೃಪ್ತಿ ಹೊರ ಸಿಡಿಯಿತು. ಆನಂದರಾಜುಗೆ ಅರ್ಥವಾಗಿರಬೇಕು. ನನ್ನ ಹೆಗಲ ಮೇಲೆ ಕೈಯಿಟ್ಟು, ''ಅಯ್ಯೋ ಬಿಡಯ್ಯ! ನಾನೂ ಅಲ್ಲೆ ಇದ್ದೆ. ನೀನು ಸರಿಯಾಗಿ ಹೇಳಿದೆ. ನಾನೂ ರಾಜಕೀಯದಲ್ಲಿದ್ದೀನಿ. ಹಿಂಗೆ